ಹೆಚ್ಚುವರಿಯಾಗಿ ಗುತ್ತಿಗೆದಾರರ ಹತ್ತಿರ ಇರುವಂಥದ್ದನ್ನು ವಸೂಲು ಮಾಡುವುದಕ್ಕೆ, ಅದಕ್ಕೆ ಕಾರಣರಾದಂಥವರ ಮೇಲೆ ತಾವು ಭರವಸೆ ಕೊಟ್ಟಂತೆ ಇನ್ನು ಒಂದು ತಿಂಗಳಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ನಾನು ಮತ್ತೊಮ್ಮೆ ಕೋರುತ್ತೇನೆ.

ಅಧ್ಯಕ್ಷರು:– ಆಯಿತು, ಮುಂದಿನ ಪ್ರಶ್ನೆ ಮನೋಹರ್ ತಹಶೀಲ್ದಾರ್‌ರವರದ್ದು.

ಪೊಲೀಸ್ ಠಾಣೆಗಳನ್ನು ತೆರೆಯುವುದು

178 (2980); ಶ್ರೀ ಮನೋಹರ್ ಹೆಚ್. ತಹಶೀಲ್ದಾರ್ (ಹಾನಗಲ್)

ಅ) ಹಾನಗಲ್ ತಾಲ್ಲೂಕಿನ 161 ಗ್ರಾಮಗಳಲ್ಲಿ ಕೇವಲ 2 ಪೊಲೀಸ್ ಠಾಣೆಗಳಿದ್ದು, 2 ಔಟ್ ಪೋಸ್ಟ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ; ಈ ಎರಡು ಔಟ್ ಪೋಸ್ಟ್ ಪೊಲೀಸ್ ಠಾಣೆಗಳನ್ನು ಸ್ಥಳಾಂತರಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ, ಬೊಮ್ಮನಹಳ್ಳಿ ಮತ್ತು ಬೆಳಗಾಲ ಪೇಟೆ ಗ್ರಾಮಗಳಲ್ಲಿ ಪ್ರಾರಂಭಿಸಲಾಗುವುದೇ;

ಇ) ಹಾಗಿದ್ದಲ್ಲಿ, ಅಕ್ಕಿ ಆಲೂರು ಮತ್ತು ತಿಳುವಳ್ಳಿ ಗ್ರಾಮದಲ್ಲಿ ಹೊಸ ಪೊಲೀಸ್ ಠಾಣೆಗಳನ್ನು ಯಾವಾಗ ಪ್ರಾರಂಭಿಸಲಾಗುವುದು;

ಈ) ರಾಜ್ಯದಲ್ಲಿ ಔಟ್ ಪೋಸ್ಟ್ ಸ್ಟೇಷನ್ ಮತ್ತು ಹೊಸ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಗಳು ಸರ್ಕಾರದ ಮುಂದಿವೆಯೇ;

ಉ) ಹಾಗಿದ್ದಲ್ಲಿ, ಇವುಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗುವುದು (ವಿವರ ನೀಡುವುದು)?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಪ್ರಸ್ತುತ ಹಾನಗಲ್ ತಾಲ್ಲೂಕಿನ 2 ಪೊಲೀಸ್ ಹೊರಠಾಣೆಗಳನ್ನು ಸ್ಥಳಾಂತರಿಸುವ ಯಾವುದೇ ಪ್ರಸ್ತಾವನೆ ಇಲಾಖೆಯ ಪರಿಶೀಲನೆಯಲ್ಲಿರುವುದಿಲ್ಲ.

ಆ) ಬೊಮ್ಮಹನಳ್ಳಿ ಮತ್ತು ಬೆಳಗಾಲ ಪೇಟೆ ಗ್ರಾಮಗಳಲ್ಲಿ ಹೊರಠಾಣೆ ಪ್ರಾರಂಭಿಸುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ. ವಾರ್ಷಿಕವಾಗಿ 300 ಅಪರಾಧ ಪ್ರಕರಣಗಳು ದಾಖಲಾಗಿದ್ದು, ವಿಸ್ತೀರ್ಣ 75 ಮೈಲಿ/150 ಚದರ ಕಿಲೋ ಮೀಟರ್‌ವಿದ್ದು, ಜನಸಂಖ್ಯೆ: 50 ರಿಂದ 60 ಸಾವಿರ ಇದ್ದಲ್ಲಿ ಹೊಸ ಪೊಲೀಸ್ ಠಾಣೆ ಪ್ರಾರಂಭಿಸಲು ರಾಷ್ಟ್ರೀಯ ಪೊಲೀಸ್ ಆಯೋಗವು ಮಾನದಂಡಗಳನ್ನು ಪೂರೈಸಿದ್ದಲ್ಲಿ ಹಾಗೂ ಹೊರಠಾಣೆ ತೆರೆಯುವ ಅಗತ್ಯತೆ ಕಂಡುಬಂದಲ್ಲಿ ಸದರಿ ಗ್ರಾಮಗಳಲ್ಲಿ ಹೊರಠಾಣೆ ತೆರೆಯುವ ಕುರಿತು ಪರಿಶೀಲಿಸಲಾಗುವುದು.

ಇ) ಈಗಾಗಲೇ ಅಕ್ಕಿಆಲೂರು ಮತ್ತು ತಿಳುವಳ್ಳಿ ಗ್ರಾಮಗಳಲ್ಲಿ ಪ್ರಸ್ತುತ ಹೊರಠಾಣೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಹೊರ ಠಾಣೆಗಳನ್ನು ಮೇಲ್ದರ್ಜೆಗೇರಿಸಬೇಕಾದಲ್ಲಿ ಮಾನದಂಡಗಳನ್ವಯ ವಿಸ್ತೀರ್ಣ 75 ಮೈಲಿ/150 ಚದರ ಕಿಲೋ ಮೀಟರ್‌ವಿದ್ದು, ಜನಸಂಖ್ಯೆ: 50 ರಿಂದ 60 ಸಾವಿರ ಇರಬೇಕಾಗುತ್ತದೆ. ವಾರ್ಷಿಕವಾಗಿ 300 ಅಪರಾಧ ಪ್ರಕರಣಗಳು ದಾಖಲಾಗಿರಬೇಕು. ಪ್ರಸ್ತುತ ಅಕ್ಕಿ ಆಲೂರು ಮತ್ತು ತಿಳುವಳ್ಳಿ ಗ್ರಾಮಗಳು ಮಾನದಂಡದನ್ವಯ ಜನಸಂಖ್ಯೆ ಹಾಗೂ ವಿಸ್ತೀರ್ಣ ಹೊಂದಿದ್ದು, ಕಳೆದ 03 ವರ್ಷಗಳಲ್ಲಿ ದಾಖಲಾಗಿರುವ ಅಪರಾಧ ಪ್ರಮಾಣಗಳು ಕಡಿಮೆ ಇರುತ್ತವೆ. ಆದ್ದರಿಂದ ಮುಂದಿನ ದಿನಗಳಲ್ಲಿ ಸದರಿ ಗ್ರಾಮಗಳು ರಾಷ್ಟ್ರೀಯ ಪೊಲೀಸ್ ಆಯೋಗವು ನಿಗಧಿಪಡಿಸಿರುವ ಮಾನದಂಡವನ್ನು ಪೂರೈಸಿದ್ದಲ್ಲಿ ಆಯವ್ಯಯದ ಲಭ್ಯತೆ, ಆದ್ಯತೆ ಹಾಗೂ ಅವಶ್ಯಕತೆಗನುಗುಣವಾಗಿ ಪೂರ್ಣ

ಪ್ರಮಾಣದ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ಈ) ಮತ್ತು ಉ) 2015–16 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 469 ರಲ್ಲಿ ಘೋಷಿಸಿದಂತೆ, ಜಿಲ್ಲಾ ಕೇಂದ್ರಗಳಲ್ಲಿ 10 ಮಹಿಳಾ ಪೊಲೀಸ್ ಠಾಣೆಗಳನ್ನು ಒಳಗೊಂಡಂತೆ ಒಟ್ಟು 30 ಪೊಲೀಸ್ ಠಾಣೆಗಳನ್ನು ಪ್ರಾರಂಭಿಸುವ ಕುರಿತು ಪರಿಶೀಲಿಸಲಾಗುತ್ತಿದೆ.

ಶ್ರೀ ಮನೋಹರ್ ಎಚ್. ತಹಶೀಲ್ದಾರ್:– ಮಾನ್ಯ ಅಧ್ಯಕ್ಷರೆ, ಅವರ ಉತ್ತರದಲ್ಲಿ 50 ರಿಂದ 60 ಸಾವಿರ ಜನಸಂಖ್ಯೆಯಿದ್ದು ವಿಸ್ತೀರ್ಣ 75 ಮೈಲಿ ಅಥವಾ 175 ಚದರ ಕಿ.ಮೀ. ಇದ್ದರೆ ಒಂದೊಂದು ಪೊಲೀಸ್ ಸ್ಟೇಷನ್ ಕೊಡುವುದಕ್ಕೆ ನಿಯಮವಿದೆಯೆಂದು ತಿಳಿಸಿದ್ದಾರೆ. ಈಗಾಗಲೇ ನಮ್ಮ ತಾಲ್ಲೂಕಿನ ಜನಸಂಖ್ಯೆ 2 ಲಕ್ಷಕ್ಕಿಂತಲೂ ಹೆಚ್ಚು ಇರುವುದರಿಂದ, ಅಲ್ಲಿ ಈಗ ಎರಡೇ ಎರಡು ಪೊಲೀಸ್ ಸ್ಟೇಷನ್‌ಗಳಿವೆ. ಅದೂ ಈಗ ಶಿರಸಿ–ಮೊಳಕಾಲ್ಮೂರು ರೋಡ್ State Highway ಕೂಡ ಆಗಿರುವುದರಿಂದ traffic ಜಾಸ್ತಿಯಾಗುತ್ತಿದೆ. ಈ ಕಾರಣದಿಂದಾಗಿ ಈಗ ನಾವು ತಿಳುವಳ್ಳಿ ಮತ್ತು ಅಕ್ಕಿ ಆಲೂರಿನಲ್ಲಿ ಎರಡು ಪೊಲೀಸ್ ಸ್ಟೇಷನ್‌ಗಳು ಬೇಕೆಂದು ಬಹಳ ದಿವಸಗಳಿಂದ ನಮ್ಮ ಬೇಡಿಕೆಯಿದೆ. ಈಗ ತತ್‌ಕ್ಷಣಕ್ಕೆ ಎರಡೂ ಆಗದಿದ್ದರೂ ಕೂಡ ಒಂದನ್ನಾದರೂ, ತಮಗೆ ಗೊತ್ತಿದೆ ಆ ತಿಳುವಳ್ಳಿಯ ಹತ್ತಿರ ಹಳ್ಳಿಬೈಲ್‌ನಿಂದ ಹಿಡಿದು ಆಲೂರು ಪೊಲೀಸ್ ಸ್ಟೇಷನ್‌ಗೆ ಹೋಗಬೇಕಾದರೆ ಮಧ್ಯ ವರದಾ ನದಿ ಇರುವುದರಿಂದ ಬಹಳ ಸುತ್ತಿಕೊಂಡು ಹೋಗಬೇಕಾಗುತ್ತದೆ. ಇದರಿಂದಾಗಿ ಬಹಳಷ್ಟು ತೊಂದರೆಯಾಗುತ್ತಿದೆ. ಕನಿಷ್ಟ ತಿಳುವಳ್ಳಿ ಗ್ರಾಮಕ್ಕಾದರೂ ಒಂದು ಪೊಲೀಸ್ ಸ್ಟೇಷನ್ ಕೊಡುವಂಥ ಭರವಸೆ ನಿಮ್ಮಿಂದ ಬೇಕಾಗಿದೆ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮುಖ್ಯಮಂತ್ರಿಯವರು ಬಜೆಟ್ ಭಾಷಣದಲ್ಲಿ 30 ಹೊಸ ಪೊಲೀಸ್ ಸ್ಟೇಷನ್‌ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ 10 ಪೊಲೀಸ್ ಸ್ಟೇಷನ್, ಮಹಿಳಾ ಪೊಲೀಸ್ ಸ್ಟೇಷನ್, 30 ಜಿಲ್ಲೆಗಳಲ್ಲಿ ಈಗಾಗಲೇ 20 ಜಿಲ್ಲೆಗಳಿಗೆ ಕೊಟ್ಟಿದ್ದೇವೆ. ಇನ್ನು ಹತ್ತು ಜಿಲ್ಲೆಗಳಿಗೆ ಮಹಿಳಾ ಪೊಲೀಸ್ ಸ್ಟೇಷನ್‌ಗಳನ್ನು ಆದ್ಯತೆಯ ಮೇಲೆ ಕೊಡಬೇಕಾಗುತ್ತದೆ. ಅದನ್ನು ಮೊದಲು ಮಾಡುತ್ತೇವೆ. 20 ಪೊಲೀಸ್ ಸ್ಟೇಷನ್‌ಗಳಲ್ಲಿ ಆದ್ಯತೆಯ ಮೇಲೆ ರಾಷ್ಟ್ರೀಯ ಪೊಲೀಸ್ ಆಯೋಗದವರು ಏನು ಹೇಳುತ್ತಾರೆಂದರೆ, ಅವರು population ಬಗ್ಗೆ ಹೇಳಿದ್ದಾರೆ, ವಿಸ್ತೀರ್ಣದ ಬಗ್ಗೆ ಹೇಳಿದ್ದಾರೆ. ಮೂರನೆಯದಾಗಿ crime ಬಗ್ಗೆ ಹೇಳಿದ್ದಾರೆ. ಮಾನ್ಯ ಸದಸ್ಯರೆ, ತಮ್ಮ ಕ್ಷೇತ್ರದ ಜನರನ್ನು ನಾವು ಅಭಿನಂದಿಸಬೇಕು. ಏಕೆಂದರೆ crime rate ಬಹಳ ಕಡಿಮೆಯಿದೆ. ಇದರ ಬಗ್ಗೆ ಅಂಕಿ–ಅಂಶ ನೋಡಿದರೆ ತಿಳುವಳ್ಳಿಯಲ್ಲಿ 2012 ರಲ್ಲಿ ಕೇವಲ 58 ಕೇಸ್, 2013 ರಲ್ಲಿ 60 ಕೇಸ್, 2014 ರಲ್ಲಿ 25 ಕೇಸ್, ಅಂದರೆ crime rate ಕಡಿಮೆಯಾಗುತ್ತಾ ಬರುತ್ತಿದೆ. ಇದೇ ರೀತಿ ಇನ್ನೊಂದು ಜಾಗದಲ್ಲಿ ಕೂಡ 2012 ರಲ್ಲಿ 52, 2013 ರಲ್ಲಿ 59, ಈಗ 40 ಕ್ಕೆ ಬಂದಿದೆ. 300 crime case ಗಳಿದ್ದರೆ ಮಾತ್ರ ಒಂದು ಪೊಲೀಸ್ ಸ್ಟೇಷನ್ ಮಾಡುವುದಕ್ಕೆ ಅವಕಾಶವಿದೆ.

ಅಧ್ಯಕ್ಷರು:– ಈಗ ಅವೆಲ್ಲಾ ಬೇಡ. ಈಗ ಅವರು ಕೇಳುತ್ತಿದ್ದಾರೆ. ಎಂದರೆ ಅದರ ಬಗ್ಗೆ ಪರಿಶೀಲನೆ ಮಾಡಿ.

ಶ್ರೀ ಕೆ.ಜೆ. ಜಾರ್ಜ್:– ಆದ್ಯತೆ ಮೇಲೆ ಪರಿಶೀಲನೆ ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮನೋಹರ್ ಹೆಚ್. ತಹಶೀಲ್ದಾರ್:– ನಮ್ಮ ಕ್ಷೇತ್ರದ ಜನರು ಬಹಳ ಒಳ್ಳೆಯವರು. ಜನರು ಹೆಚ್ಚಾಗಿ ರಾಜೀ ಮಾಡಿಕೊಂಡು ಕೇಸ್‌ಗಳನ್ನು ಮುಕ್ತಾಯ ಮಾಡಿಕೊಳ್ಳುತ್ತಿದ್ದಾರೆ. ಪೊಲೀಸ್ ಸ್ಟೇಷನ್ ತೆರೆಯಬೇಕೆಂದರೆ crime rate ಹೆಚ್ಚು ಮಾಡಿದರ ಕೂಡುತ್ತೇವಂದರ ನಾಳಯಿಂದಲೇ ಆ ಕೆಲಸವನ್ನು ನಾವು ಪ್ರಾರಂಭ ಮಾಡಬೇಕಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್:– ಹಾಗೆ ಮಾಡುವುದಕ್ಕೆ ಹೋಗಬೇಡಿ. ಎಲ್ಲಾ ಕಡೆಯಲ್ಲಿಯೂ ಪೊಲೀಸ್ ಸ್ಟೇಷನ್ ಕಡಿಮೆಯಾಗಬೇಕು. ನಮ್ಮ ರಾಜ್ಯದಲ್ಲಿ ಪೊಲೀಸ್ ಸ್ಟೇಷನ್‌ಗೆ ಹೆಚ್ಚಿನ ಬೇಡಿಕೆ ಬರುತ್ತಿದೆ. ಪೊಲೀಸ್ ಸ್ಟೇಷನ್ ಎಂದರೆ ತಮಗೆ ಗೊತ್ತಿದೆ, ಏನೆಂದರೆ ಒಂದು ಪೊಲೀಸ್ ಸ್ಟೇಷನ್ ತೆರೆಯಬೇಕೆಂದರೆ ನಮಗೆ ಸಿಬ್ಬಂದಿ ವರ್ಗ ಬೇಕಾಗುತ್ತದೆ, ಪೊಲೀಸ್ ಠಾಣೆಗಳನ್ನು ಮಾಡಬೇಕೆಂದರೆ ಸುಮಾರು 6 ರಿಂದ 7 ಕೋಟಿ ರೂ. ಗಳು ಬೇಕಾಗುತ್ತದೆ, ಪೊಲೀಸ್ ಠಾಣೆಗಳನ್ನು ಮಾಡಬೇಕೆಂದರೆ ಸುಮಾರು 6 ರಿಂದ 7 ಕೋಟಿ ರೂ. ಗಳು ನಮಗೆ ಬೇಕಾಗುತ್ತದೆ. ಅದಕ್ಕೆ Finance Department ನಿಂದ ಹಣವನ್ನು ಅವರು ಎಷ್ಟು ಕೊಡುತ್ತಾರೋ ಅದನ್ನು ನೋಡಿಕೊಂಡು ಆದ್ಯತೆಯನುಸಾರವಾಗಿ ನಾವು ಕೊಡುತ್ತೇವೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಮನೋಹರ್ ಹೆಚ್. ತಹಶೀಲ್ದಾರ್:– ಆ ರೀತಿಯಲ್ಲ. ನನಗೆ ಖಚಿತವಾದ ಉತ್ತರ ಬೇಕು. ನಾನು ಪೊಲೀಸ್ ಸ್ಟೇಷನ್ ಬೇಕು ಎಂದು ಕೇಳಿದ್ದು, ಬಹಳ ದೂರವಾಗುತ್ತದೆ. ಆದುದರಿಂದ ಕನಿಷ್ಟ ತಿಳುವಳ್ಳಿಯಲ್ಲಾದರೂ ಒಂದು ಪೊಲೀಸ್ ಸ್ಟೇಷನ್ ಮುಂದೆ ಮಾಡುತ್ತೇವೆ ಎನ್ನುವ ಭರವಸೆ ಮಾನ್ಯ ಸಚಿವರಿಂದ ನನಗೆ ಬೇಕಾಗಿದೆ. ಈಗ out post ಇದೆ. ಉಪಯೋಗವಿಲ್ಲ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಲ್ಲಿ ಎರಡು out post ಗಳಿದ್ದು ಅವು ಕಾರ್ಯನಿರ್ವಹಿಸುತ್ತಿವೆ.

ಅಧ್ಯಕ್ಷರು:– ಈಗ ಅದೆಲ್ಲಾ ಬೇಡ. ಈಗ ಅವರು ತಿಳುವಳ್ಳಿಯಲ್ಲಿ ಒಂದು ಪೊಲೀಸ್ ಸ್ಟೇಷನ್ ಬೇಕು ಎಂದು ಕೇಳುತ್ತಿದ್ದಾರೆ. ಆಗುತ್ತೋ ಇಲ್ಲವೋ ಎಂದು ಸ್ಪಷ್ಟವಾಗಿ ಹೇಳಿ.

ಶ್ರೀ ಕೆ.ಜೆ. ಜಾರ್ಜ್:– ಪೊಲೀಸ್ ಸ್ಟೇಷನ್ ತೆರೆಯುವ ವಿಚಾರದಲ್ಲಿ National Police Commission guidelines ಇದ್ದು ಅದು ಬೇರೆ ಕಡೆ.

ಶ್ರೀ ಮನೋಹರ್ ಹೆಚ್. ತಹಶೀಲ್ದಾರ್:– ಆ ಪ್ರಕಾರ ಬರುತ್ತದೆ. ನಿಮ್ಮ norms ಗೆ ಒಳಪಟ್ಟಿರುವುದೇ ಅದು.

ಶ್ರೀ ಕೆ.ಜೆ. ಜಾರ್ಜ್:– ಈಗ ನಾನು ಹೇಳಿದಂತೆಲ್ಲಾ ಪೊಲೀಸ್ ಸ್ಟೇಷನ್ ಕೊಡುವುದಕ್ಕೆ ಆಗುವುದಿಲ್ಲ. ಇದನ್ನು ಪರಿಶೀಲನೆ ಮಾಡಿ ನಮ್ಮ SP ಯಿಂದ, DGP ಯಿಂದ recommendation ಬಂದಮೇಲೆ recommendation ನೋಡಿ ಕೊಡುತ್ತೇವೆ.

ಅಧ್ಯಕ್ಷರು:– OK, ಇನ್ನೊಂದು ಸಾರಿ ರಿಪೋರ್ಟ್ ತರಿಸಿಕೊಳ್ಳಿ, ಪಾಪ ಅವರಿಗೆ ಅಲ್ಲಿ ಪೊಲೀಸ್ ಸ್ಟೇಷನ್ ಬೇಕಂತೆ.

ಶ್ರೀ ಮನೋಹರ್ ಹೆಚ್. ತಹಶೀಲ್ದಾರ್:– ಅಲ್ಲಿ ಪೊಲೀಸ್ ಸ್ಟೇಷನ್ ಬಹಳ ಅವಶ್ಯವಿದೆಯೆನ್ನುವ ಮಾತನ್ನು ಒತ್ತಿಹೇಳುತ್ತಿದ್ದೇನೆ. ಈಗ ನನಗೆ ಮಾನ್ಯ ಸಚಿವರಿಂದ ಸ್ಪಷ್ಟವಾದ ಭರವಸೆ ಬೇಕು. ಈಗ ಹೇಳುತ್ತಿರುವ ಹಾಗೆ ನೋಡೋಣ, ಮಾಡೋಣವೆನ್ನುವುದು ಬೇಡ. ಇದು ಆಗಲೇಬೇಕು. ಇದು ನಮ್ಮ ಬಹಳ ವರ್ಷಗಳ ಬೇಡಿಕೆಯಾಗಿದೆ.

ಅಧ್ಯಕ್ಷರು:– ಮನೋಹರ್ ತಹಶೀಲ್ದಾರ್ ಇಲ್ಲಿ ಕೇಳ್ರಿ, ಇಲ್ಲಿ ಸುಮ್ಮನೆ ಆ ರೀತಿಯಲ್ಲಿ ಕೇಳುವುದಕ್ಕೆ ಹೋಗಬಾರದು. ನೀವು ಅವರ ಹತ್ತಿರ ಕುಳಿತುಕೊಂಡು ಮಾತನಾಡಿ ಇನ್ನೊಂದು ಸಾರಿ ಪರಿಶೀಲನೆ ಮಾಡಿ ಎಂದು ಹೇಳಿ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲವೇ,

ಶ್ರೀ ಮನೋಹರ್ ಹೆಚ್. ತಹಶೀಲ್ದಾರ್:– ಆಯಿತು ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:– ಆಯಿತು ಬಿಡಿ. ಈಗ ಮುಂದಿನ ಪ್ರಶ್ನೆ ರಮೇಶ್ ಬಂಡಿಸಿದ್ದೇಗೌಡರದು, ಇಲ್ಲ, ಮುಂದಿನ ಪ್ರಶ್ನೆ ವಿನಿಶಾ ನೆರೊ ಅವರೂ ಇಲ್ಲ, ಇನ್ನು ತಡೆ ಹಿಡಿಯಲಾದ ಪ್ರಶ್ನೆಗಳಲ್ಲಿ ಡಾ॥ ಕೆ. ಶ್ರೀನಿವಾಸಮೂರ್ತಿ ಯವರು ಪ್ರಶ್ನೆ ಕೇಳಬೇಕು. ಅವರೂ ಇಲ್ಲ. ತಡೆ ಹಿಡಿಯಲಾದ ಪ್ರಶ್ನೆಗಳಲ್ಲಿ ಮುಂದಿನ ಪ್ರಶ್ನೆ ಪಿ.ಎಂ. ನರೇಂದ್ರಸ್ವಾಮಿಯದ್ದು ಇದ.